# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., (ರಿ)


**ಪ್ರಧಾನ ಕಛೇರಿ : 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು -570 004**

**☎ 0821-2330014, 2334140**

**ಶಾಖಾ ಕಛೇರಿ : ಸಿಐ-16, 2ನೇ ಹಂತ, ವಿಜಯನಗರ, ಮೈಸೂರು-570 017 ☎ 0821-2411556**


## ಸೊಸೈಟಿಯ 2022-23ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರೇ,

ಮೇಲ್ಕಂಡ ಸೊಸೈಟಿಯ 2022-23ನೇ ಸಾಲಿನ 28ನೇ ವಾರ್ಷಿಕ ಮಹಾಸಭೆಯನ್ನು

**ದಿನಾಂಕ:27/08/2023ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ**

ಸಂಘದ ಅಧ್ಯಕ್ಷರಾದ

**ಶ್ರೀ ಸಿ ವಿ ಪಾರ್ಥಸಾರಥಿ,** ಬಿ.ಎ.,

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ

**ಸ್ಥಳ**:

ಶಾರದ ವಿಲಾಸ ಶತಮಾನೋತ್ಸವ ಭವನ

ಕೃಷ್ಣಮೂರ್ತಿಪುರಂ, ಮೈಸೂರು

ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ತಪ್ಪದೆ ಸಭೆಗೆ ಹಾಜರಾಗಬೇಕಾಗಿ ಕೋರಲಾಗಿದೆ

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ

ವೀಣಾ ಎನ್

ಪ್ರಭಾರ ಕಾರ್ಯದರ್ಶಿ

ದಿನಾಂಕ: 11/08/2023

**ವಿಶೇಷ ಸೂಚನೆ:**

1) ನಮ್ಮ ಸಂಘದಲ್ಲಿ 6146 ಸದಸ್ಯರಿದ್ದು, ಕೋರಂ ಶೇಕಡಾ 10 ಅಂದರೆ ಕನಿಷ್ಠ 615 ಸದಸ್ಯರು ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲೇ ಬೇಕಾಗಿರುತ್ತದೆ. ಆದುದರಿಂದ ಸದಸ್ಯರು ಸಭೆ ನಿಗದಿಯಾಗಿರುವ ಸಮಯಕ್ಕೆ ಸರಿಯಾಗಿ ಹಾಜರಿದ್ದು ಸಭೆಯನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಲಾಗಿದೆ.
2) ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಯಾವುದೇ ವಿಷಯ ಅಥವಾ ಸಲಹೆ ಸೂಚನೆಗಳೇನಾದರೂ ಇದ್ದಲ್ಲಿ ಸರ್ವ ಸದಸ್ಯರ ಸಭೆಗೆ ಐದು(5) ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಸಂಘದ ಪ್ರಧಾನ ಕಛೇರಿ ವ್ಯವಹಾರದ ವೇಳೆಯಲ್ಲಿ ಪ್ರಭಾರ ಕಾರ್ಯದರ್ಶಿಯವರಿಗೆ ತಲುಪಿಸಬೇಕು. ನಂತರ ಬಂದ ವಿಷಯಗಳಿಗೆ ಮಹಾಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ. ತಾವು ಕೇಳಿರುವ ವಿಷಯಗಳಿಗೆ ಟಿಪ್ಪಣಿ ಹಾಗೂ ದಾಖಲೆಗಳನ್ನು ತಯಾರು ಮಾಡಿಕೊಳ್ಳಲು ಕಾಲಾವಕಾಶ ಬೇಕಾಗಿರುವುದರಿಂದ ಸದಸ್ಯರು ಸಹಕರಿಸಬೇಕಾಗಿ ಕೋರಲಾಗಿದೆ.
3) ಸದಸ್ಯರು ಕಡ್ಡಾಯವಾಗಿ ಷೇರು ಪಾಸ್ ಪುಸ್ತಕ ಅಥವಾ ಗುರುತಿನ ಚೀಟಿಯನ್ನು ತರತಕ್ಕದ್ದು.
4) ಸದಸ್ಯರಿಗೆ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿದೆ.

# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., (ರಿ)

**ಪ್ರಧಾನ ಕಛೇರಿ : 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು -570 004**
**☎ 0821-2330014, 2334140**

**ಶಾಖಾ ಕಛೇರಿ : ಸಿಎ-16, 2ನೇ ಹಂತ, ವಿಜಯನಗರ, ಮೈಸೂರು-570 017 ☎ 0821-2411556**

**ಪ್ರತಿಭಾ ಪುರಸ್ಕಾರ ಮತ್ತು ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ**
**ಹಾಗೂ**
**ಸಂಘದ ಸದಸ್ಯರು ಹಾಗೂ ಕೆ ಆರ್ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸರವರಿಗೆ ಸಂಘದ ವತಿಯಿಂದ ಗೌರವಪೂರ್ವಕ ಸನ್ಮಾನ ಕಾರ್ಯಕ್ರಮ**

**ದಿನಾಂಕ:27/08/2023ರ ಭಾನುವಾರ ಬೆಳಿಗ್ಗೆ 9.30 ಗಂಟೆಗೆ**
ಸಂಘದ ಅಧ್ಯಕ್ಷರಾದ
**ಶ್ರೀ ಸಿ ವಿ ಪಾರ್ಥಸಾರಥಿ,** ಬಿ.ಎ.,
ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ
**ಸ್ಥಳ:**
## ಶಾರದಾ ವಿಲಾಸ ಶತಮಾನೋತ್ಸವ ಭವನ
**ಕೃಷ್ಣಮೂರ್ತಿಪುರಂ, ಮೈಸೂರು.**
**ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ತಪ್ಪದೆ ಕಾರ್ಯಕ್ರಮಕ್ಕೆ ಹಾಜರಾಗಬೇಕಾಗಿ ಕೋರಲಾಗಿದೆ**

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ವೀಣಾ ಎನ್
ಪ್ರಭಾರ ಕಾರ್ಯದರ್ಶಿ

ದಿನಾಂಕ: 11/08/2023

**ವಿಶೇಷ ಸೂಚನೆ: ಸಂಘದ ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಮತ್ತು ತತ್ಸಮ ಪರೀಕ್ಷೆಗಳಲ್ಲಿ, ಸಂಸ್ಕೃತ, ಸಂಗೀತ, ನೃತ್ಯ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಶೇಕಡ 85 ಮತ್ತು ಅದಕ್ಕಿಂತ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರನ್ನು ಪುರಸ್ಕರಿಸಲಾಗುವುದು. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಪೋಷಕರು ಮಹಾಸಭೆಗೆ ಕಡ್ಡಾಯವಾಗಿ ಹಾಜರಾಗಿ ಪುರಸ್ಕಾರವನ್ನು ಪಡೆಯತಕ್ಕದ್ದು. ಈ ಸಂಧರ್ಭದಲ್ಲಿ ಹಾಜರಾಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕಾರ್ಯಕ್ರಮ ಮುಗಿದ ನಂತರ ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಗುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ/ವಿದ್ಯಾರ್ಥಿನಿಯರ ತಂದೆ ತಾಯಿಗಳು ಸಂಘದ ಕಛೇರಿ ವ್ಯವಹಾರದ ವೇಳೆಯಲ್ಲಿ ಲಿಖಿತ ಅರ್ಜಿ, ಅಂಕ ಪಟ್ಟಿಯ ಜೆರಾಕ್ಸ್ ಪ್ರತಿ ಹಾಗೂ ಸದಸ್ಯತ್ವದ ಪಾಸ್‌ಪುಸ್ತಕದೊಂದಿಗೆ, ವಿದ್ಯಾರ್ಥಿ/ವಿದ್ಯಾರ್ಥಿನಿಯರ ಒಂದು ಇತ್ತೀಚಿನ ಭಾವಚಿತ್ರವನ್ನು ದಿನಾಂಕ 20/08/2023ರ ಮಧ್ಯಾಹ್ನ 1.00 ಗಂಟೆಯ ಒಳಗೆ ಸಲ್ಲಿಸಬೇಕು.**

**ಸಂಘದ ಸದಸ್ಯರು ಯಾವುದೇ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿ ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿ ಪುರಸ್ಕೃತರಾಗಿದ್ದಲ್ಲಿ ಅಂತಹವರನ್ನು ಮಹಾಸಭೆಯಲ್ಲಿ ಪುರಸ್ಕರಿಸುವ ಸಲುವಾಗಿ ಸಂಪೂರ್ಣ ಮಾಹಿತಿಯನ್ನು ವ್ಯವಹಾರದ ವೇಳೆಯಲ್ಲಿ ದಿನಾಂಕ 20/08/2023ರ ಮಧ್ಯಾಹ್ನ 1.00 ಘಂಟೆಯ ಒಳಗಾಗಿ ಸಂಘಕ್ಕೆ ನೀಡಬೇಕಾಗಿ ವಿನಂತಿ.**

**80 ವರ್ಷ ಮೇಲ್ಪಟ್ಟ ಸಂಘದ ಹಿರಿಯ ಸದಸ್ಯರನ್ನು ಸರ್ವಸದಸ್ಯರ ಸಭೆಯಲ್ಲಿ ಗೌರವಾನ್ವಿತವಾಗಿ ಸನ್ಮಾನಿಸಲಾಗುವುದು. ಸಂಬಂಧಪಟ್ಟ ಸದಸ್ಯರು ಸಂಪೂರ್ಣ ಮಾಹಿತಿಯನ್ನು ದಿನಾಂಕ:20/08/2023ರ ಒಳಗಾಗಿ ಸಂಘಕ್ಕೆ ನೀಡಬೇಕಾಗಿ ವಿನಂತಿ.**